ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪಿಸಿರುವ ವಿಷಯವನ್ನು ಪ್ರಾರಂಭಿಕವಾಗಿ ಪ್ರಸ್ತಾಪಿಸಿರುತ್ತಾರೆ. ಈ ವಿಚಾರವನ್ನು ನಿಯಮ 69ರ ಅಡಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬಹುದೆಂದು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹೇಳಿದ್ದಾರೆ. ಇವತ್ತಿನ ಕಾರ್ಯ ಕಲಾಪಗಳ ಪಟ್ಟಿಯಲ್ಲಿ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆಗೆ ಅವಕಾಶ ಇದೆ. ಆದರೆ, ಈ ವಿಷಯದ ಗಂಭೀರತೆಯನ್ನು ಪರಿಗಣಿಸಿ ವಿಷಯವನ್ನು ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 69ರ ಅಡಿಯಲ್ಲಿ ಚರ್ಚಿಸಲು ಅವಕಾಶ ನೀಡಿದೆ. ಮತ್ತೆ ಈಗಾಗಲೇ ಚರ್ಚೆ ಪ್ರಾರಂಭ ಮಾಡಬೇಕಾಗಿದೆ.

7. ನಿಯಮ 69ರ ಅಡಿಯಲ್ಲಿ ಚರ್ಚೆ :

ವಿಷಯ: ರಾಜ್ಯದಲ್ಲಿ ಬರಗಾಲದ ಬಗ್ಗೆ ಚರ್ಚೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ನಿಯಮ 69ಕ್ಕೆ ಕನ್ವರ್ಟ್ ಮಾಡಿದ್ದೀರೆಂದು ನಾನು ತಿಳಿದುಕೊಂಡಿದ್ದೆ.

ಅಧ್ಯಕ್ಷರು : ಏನೂ ತೊಂದರೆ ಇಲ್ಲ. ತಾವು ಮಾತನಾಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತಮಗೆಲ್ಲ ಗೊತ್ತಿರುವ ಹಾಗೆ ಕರ್ನಾಟಕ ರಾಜ್ಯದಲ್ಲಿ ಒಟ್ಟು ವ್ಯವಸಾಯಕ್ಕೆ ಯೋಗ್ಯವಾಗಿರುವಂಥ ಜಮೀನಿನಲ್ಲಿ ಸುಮಾರು 75% ಒಣ ಭೂಮಿ ಇದೆ. ಅಂದರೆ, ಮಳೆ ನೀರಿನ ಆಶ್ರಯದಲ್ಲಿ ಬೆಳೆ ಬೆಳೆಯತಕ್ಕಂಥ ಭೂಮಿ ಸುಮಾರು 75% ನಷ್ಟಿದೆ. ನಮ್ಮಲ್ಲಿ ಸಣ್ಣ ಹಿಡುವಳಿದಾರರು ಹೆಚ್ಚಿದ್ದಾರೆ. ಇವತ್ತಿನದಿವಸ marginal and small farmers ಜಾಸ್ತಿ ಜನ ಇದ್ದಾರೆ. ಕರ್ನಾಟಕ ರಾಜ್ಯದಲ್ಲಿ ಹಿಡುವಳಿ ಸರಾಸರಿ ಎಷ್ಟು ಬಂದಿದೆ ಎಂದರೆ, according to the Agriculture Census 2006 1.63 ಹೆಕ್ಟೇರ್‌ಗೆ ಬಂದಿದೆ. 1971ರಲ್ಲಿ 3.20 ಹೆಕ್ಟೇರ್ ಇದ್ದಂಥದು ಇವತ್ತಿನ ದಿವಸ ಹಿಡುವಳಿ ಸರಾಸರಿ 1.63 ಹೆಕ್ಟೇರ್‌ಗೆ ಬಂದಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರದ್ದು ಇನ್ನೂ ಕಡಿಮೆ ಇದೆ. ಮಳೆಯ ಆಶ್ರಯದಲ್ಲಿ 75% ಜನ ರೈತರು ಬದುಕುತ್ತಿದ್ದಾರೆ. ಮತ್ತೆ ಅನೇಕ ಭಾಗಗಳಲ್ಲಿ ಇವತ್ತಿಗೂ ಸಹ ಒಂದೇ ಒಂದು ಬೆಳೆ ಬೆಳೆಯಲಾಗುತ್ತದೆ. ಎರಡು ಬೆಳೆ ಬೆಳೆಯಲಾಗುವುದಿಲ್ಲ.

ಮುಂಗಾರು, ಹಿಂಗಾರು, ಬೇಸಿಗೆ ಬೆಳೆ ಎಂದು ಎರಡು ಬೆಳೆ ಬೆಳೆಯುತ್ತಿಲ್ಲ. ಕೇವಲ ಒಂದೇ ಒಂದು ಬೆಳೆ ಬೆಳೆಯುತ್ತಾರೆ. ಕೆಲವು ಭಾಗದಲ್ಲಿ ಮುಂಗಾರು, ಹಿಂಗಾರು, ಬೇಸಿಗೆ ಬೆಳೆ ಸಹ ಇರುತ್ತದೆ. ಆದರೆ, ಇದು ಬಹಳ ಕಡಿಮೆ ಪ್ರದೇಶದಲ್ಲಿ ಮಾತ್ರ ಇದೆ. ಸುಮಾರು 74–75 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಖುಷ್ಕಿ ಬೇಸಾಯ ನಮ್ಮಲ್ಲಿದೆ. 31 ಲಕ್ಷ ಹೆಕ್ಟೇರ್ ಪ್ರದೇಶ ಮಾತ್ರ ನೀರಾವರಿಗೆ ಒಳಪಟ್ಟಿದೆ. ಉಳಿದಂತಹ ಎಲ್ಲಾ ಪ್ರದೇಶಗಳು ಮಳೆ ಆಶ್ರಯದಲ್ಲಿ ಬೆಳೆ ಬೆಳೆಯತಕ್ಕಂಥದ್ದು ಇದೆ. ಈ ಸಾರಿ ಏನಾಗಿದೆ ಎಂದರೆ, ಮಳೆ ಇಲ್ಲದೆ ಕೆರೆಗಳು ತುಂಬಲಿಲ್ಲ. ಈಗ ಕೃಷಿ ಮಂತ್ರಿಗಳು ಯಾರಾಗಿದ್ದಾರೆ? ಬರಗಾಲದ ಬಗ್ಗೆ ಚರ್ಚೆ ನಡೆಯುತ್ತಿದೆ. ಆದರೆ, ಕೃಷಿ ಇಲಾಖೆ ಮಂತ್ರಿಗಳು ಇಲ್ಲಿಲ್ಲ. ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆಯ ಮಂತ್ರಿಗಳು ಇದ್ದಾರೆ. ಆದರೆ, ಸಹಕಾರ ಇಲಾಖೆ, ಕೃಷಿ ಇಲಾಖೆ ಮತ್ತು ಪಶುಸಂಗೋಪನೆ ಇಲಾಖೆ ಹಾಗೂ ರೇಷ್ಮೆ ಇಲಾಖೆಗಳ ಸಚಿವರೆಲ್ಲರೂ ಇರಬೇಕು. ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳೊಬ್ಬರೂ ಸಹ ಇಲ್ಲ. ನಾನು ಬರಗಾಲದ ಬಗ್ಗೆ ಮಾತನಾಡುವುದಕ್ಕೆ ನಿಂತುಕೊಂಡಿದ್ದೇನೆ. ಆದರೆ, ಅಧಿಕಾರಿಗಳೊಬ್ಬರೂ ಇಲ್ಲ. ಈ ವಿಷಯವನ್ನು ಪದೇಪದೆ ಎಷ್ಟು ಸಾರಿ ಹೇಳುವುದು? ಇವರು ಎಲ್ಲಿಗೆ ಹೋಗುತ್ತಾರೆ?

ಅಧ್ಯಕ್ಷರು : ಅಧಿಕಾರಿಗಳನ್ನು ಕರೆಸಿ,

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳಿಗೆ ಸ್ವಲ್ಪವೂ ಜವಾಬ್ದಾರಿ ಇಲ್ಲ. ಎಲ್ಲರೂ ಬೇಜವಾಬ್ದಾರಿತನದವರಾಗಿದ್ದಾರೆ. ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ 3478 ಕೆರೆಗಳು ಬರುತ್ತವೆ. ಇದರಲ್ಲಿ ಸುಮಾರು 1250 ಕೆರೆಗಳಿಗೆ ಮಳೆ ಇಲ್ಲದೆ ನೀರು ಬಂದಿಲ್ಲ. ಸುಮಾರು 1292 ಕೆರೆಗಳಲ್ಲಿ ಸುಮಾರು 30 ರಿಂದ 50% ನಷ್ಟು ನೀರು ತುಂಬಿದೆ. ಕೇವಲ 195 ಕೆರೆಗಳು ಮಾತ್ರ ಪೂರ್ಣವಾಗಿ ತುಂಬಿದ್ದವು. ಈ ಪರಿಸ್ಥಿತಿ ಇರುವಾಗ ಅಲ್ಲಿ ಉತ್ತಮ ವ್ಯವಸಾಯವಾಗುವುದಿಲ್ಲ. ಅಂದರೆ, ಮಳೆ ಇಲ್ಲದೆ ಕೆರೆಗಳು ತುಂಬದೆ ಇರುವುದರಿಂದ ಬಿತ್ತನೆ ಕೆಲಸ ನಡೆಯಲಿಲ್ಲ. 50% ನಷ್ಟು ಕೆರೆಗಳು ಒಣಗಿ ಹೋಗಿದ್ದವು. ಇದರಿಂದ ದುಷ್ಪರಿಣಾಮಗಳು ಯಾವರೀತಿಯಾಗುತ್ತವೆಂದರೆ, ಬಿತ್ತನೆ ಕೆಲಸ ಆಗಲಿಲ್ಲ ಮತ್ತೆ underground water ಕೆಳಕ್ಕೆ ಹೋಯಿತು. ಇದರಿಂದ ಕುಡಿಯುವ ನೀರಿಗೂ ಸಹ ತೊಂದರೆ ಆಯಿತು. ಇವತ್ತಿನ ದಿವಸ ಬರಗಾಲ ಬಂದ ಮೇಲೆ ಕುಡಿಯುವುದಕ್ಕೆ ನೀರಿಲ್ಲ ಮತ್ತೆ ದನಕರುಗಳಿಗೆ

ಮೇವು ಇಲ್ಲ ಹಾಗೆಯೇ ಜನರಿಗೆ ಕೆಲಸ ಇಲ್ಲ. ತಾವು ಪ್ರತಿದಿನ ಪತ್ರಿಕೆ ತೆಗೆದು ನೋಡಿದರೆ, ಬಿಜಾಪುರ, ಬಾಗಲಕೋಟೆ, ಗದಗ್, ರಾಯಚೂರು ಕೊಪ್ಪಳ, ಗುಲಬರ್ಗಾ ಭಾಗಗಳಲ್ಲಿ ಮಳೆ ಇಲ್ಲದೆ ಬರಗಾಲ ಬಂದಿರುವುದರಿಂದ ರೈತರು ಬೆಂಗಳೂರು, ಮಂಗಳೂರು, ಕಾರವಾರದ ಕಡೆಗೆ ಗುಳೆ ಹೋಗುತ್ತಿರುವ ವಿಚಾರ ಇರುತ್ತದೆ. ಸಾವಿರಾರು ಜನ ಎಲ್ಲ ಕಡೆಗಳಿಂದ ಗುಳೆ ಹೋಗುತ್ತಿದ್ದರೆ. ಮಾನ್ಯ ಮುರುಗೇಶ್ ನಿರಾಣಿಯವರೆ, ಗುಳೆ ಹೋಗುತ್ತಿದ್ದಾರೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಹೇಳಿ? ಮಾನ್ಯ ಮುರುಗೇಶ್ ನಿರಾಣಿಯವರು ಇಷ್ಟಕ್ಕೂ ಮಾತನಾಡುವುದಿಲ್ಲವೆಂದರೆ ಹೇಗೆ? ಅವರ ಜಾಗಕ್ಕೆ ಹೋಗಿ ಮಾತನಾಡುತ್ತಾರಾ? ಪಕ್ಕದಲ್ಲಿರುವ ಮಾನ್ಯ ಬಸವರಾಜ್ ಬೊಮ್ಮಾಯಿರವರೆ ಹೇಳಲಿ? ಮಾನ್ಯ ಬಸವರಾಜ್ ಬೊಮ್ಮಾಯಿರವರೆ, ಗದಗ್‌ನಿಂದ ಜನರು ಗುಳೆ ಹೋಗುತ್ತಿದ್ದಾರೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಹೇಳಿ.

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ : ಮಾನ್ಯ ಅಧ್ಯಕ್ಷರೆ, ಈ ವರ್ಷ ಗುಳೆ ಹೋಗುವುದು ಬಹಳ ಕಡಿಮೆಯಾಗಿದೆ. ಸುಮಾರು 50% ನಷ್ಟು ಜನ ಬರಗಾಲ ಮತ್ತು ಬೇಸಿಗೆ ಕಾಲದಲ್ಲಿ ಗುಳೆ ಹೋಗುತ್ತಿದ್ದರು. ಆದರೆ, 2004-05ನೇ ಸಾಲಿಗೆ ಹೋಲಿಕೆ ಮಾಡಿದರೆ ಕಡಿಮೆಯಾಗಿದೆ. ಈಗ ಸ್ಥಳೀಯವಾಗಿಯೇ ಕೆಲಸ ಸಿಗುವುದರಿಂದ ಗುಳೆ ಹೋಗುವುದು ಕಡಿಮೆಯಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : Industrial growth ಜಾಸ್ತಿಯಾಗಿದ್ದರಿಂದ ಗುಳೆ ಹೋಗುವುದು ತಪ್ಪಿ ಹೋಗಿದೆಯೇ?

ಶ್ರೀ ಸಿದ್ದರಾಮಯ್ಯ : ಈಗ ಉದ್ಯೋಗ ಸೃಷ್ಟಿ ಜಾಸ್ತಿ ಆಗಿದೆಯೇ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಗುಳೆ ಹೋಗುವುದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಉದ್ಯೋಗ ಅರಿಸಿ ಹೋಗುವಂಥದ್ದು ಮೊದಲು ಬಹಳ ಇತ್ತು. ಈಗ ಕಡಿಮೆಯಾಗುತ್ತಾ ಬಂದಿದೆ. ಉದ್ಯೋಗ ಖಾತ್ರಿ ಯೋಜನೆ ಕೂಡ ಇದಕ್ಕೊಂದು ಕಾರಣವಾಗಿದೆ. ಆದರೆ, ಒಂದು ಪ್ರಶ್ನೆ ಏನೆಂದರೆ, ಒಂದು ದಿವಸಕ್ಕೆ 125 ರೂಪಾಯಿ ಕೂಲಿ ಕೊಡುತ್ತೇವೆ. ಆದರೆ, ಇವತ್ತಿನದಿವಸ ಮಂಗಳೂರು, ಉಡುಪಿ ಕಡೆ 300 ರಿಂದ 400 ರೂಪಾಯಿ ಕೊಟ್ಟರೂ ಕೂಲಿಗೆ ಯಾರೂ ಬರುವುದಿಲ್ಲ. ಆದ್ದರಿಂದ, ಅಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಏನೂ ಮಾಡುವುದಕ್ಕೆ ಆಗುವುದಿಲ್ಲ. ರಾಯಚೂರು ಮತ್ತು ಇತರೇ ಭಾಗದ ಜನರು

ಬೇರೆ ಕಡೆಗೆ ಏತಕ್ಕೆ ಗುಳೆ ಹೋಗುತ್ತಾರೆಂದರೆ, ಇದಕ್ಕಿಂತ ಹೆಚ್ಚು ಕೂಲಿ ಎಲ್ಲಿ ಸಿಗುತ್ತದೆಯೋ ಅಲ್ಲಿಗೆ ಹೋಗುತ್ತಿದ್ದಾರೆ. ಇವತ್ತಿನ ದಿವಸ ಉದ್ಯೋಗ ಇಲ್ಲವೆಂದು ಹೋಗುವಂಥದು ಬೇರೆ. ಆದರೆ, ಕೂಲಿ ಜಾಸ್ತಿ ಎಲ್ಲಿ ಸಿಗುತ್ತದೆಯೋ ಅಂಥ ಕಡೆಗೆ ಜನರು ಹೋಗುತ್ತಿರುವ ದೃಷ್ಟಿಯಿಂದ ಜನರು ಬೇರೆ ಕಡೆಗೆ ವಲಸೆ ಹೋಗುತ್ತಿರುವುದು ನಿಜಾಂಶವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಹೇಳುವಂಥಹದ್ದನ್ನು ನಾನು ಅಲ್ಲಗಳೆಯುವುದಿಲ್ಲ. ಸಣ್ಣ ರೈತರು ಮತ್ತು ಅತಿಸಣ್ಣ ರೈತರು ಎಂದು ಎರಡು ವರ್ಗದ ಜನರು ಇರುತ್ತಾರೆ. ಜಮೀನು ಇಲ್ಲದ ಭೂರಹಿತ ಕಾರ್ಮಿಕರು ಇರುತ್ತಾರೆ. ಅವರು ಎಲ್ಲಿ ಕೂಲಿ ಸಿಗುತ್ತದೆ ಆ ಕಡೆಗಳಿಗೆ ಹೋಗುತ್ತಾರೆ. ಆದರೆ ವ್ಯವಸಾಯವನ್ನು ಅವಲಂಬನೆ ಮಾಡಿಕೊಂಡು ಜೊತೆಗೆ ಕೂಲಿಯನ್ನು ಮಾಡುವಂತಹವರೂ ಸಹ ಇರುತ್ತಾರೆ. ಅವರು ಈ ತರಹದ ಬರಗಾಲ ಬಂದಾಗ ಹೊರಡುವುದಕ್ಕೆ ಶುರು ಮಾಡುತ್ತಾರೆ. ಒಂದು ಎಕರೆ, ಎರಡು ಎಕರೆ ಹಾಗೂ ಮೂರು ಎಕರೆ ಜಮೀನು ಇರುವಂತಹವರು ಇರುತ್ತಾರಲ್ಲಾ ಇವರು ಸಕಾಲದಲ್ಲಿ ಮಳೆಯು ಬಾರದೆ, ಹಾಕಿದ ಬೆಳೆಗೆ ಬೆಳೆಯು ಬಾರದೆ ಇರುವುದರಿಂದ ಅವರು ಸಾಲವನ್ನು ಮಾಡಿಕೊಂಡು ಕಷ್ಟಕ್ಕೆ ಸಿಕ್ಕಿಹಾಕಿಕೊಂಡಾಗ ಈ ತರಹದವರು ಹೋಗುತ್ತಾರೆ ಇದು ಇನ್ನೊಂದು ವರ್ಗವಾಗಿದೆ. ಈ ವರ್ಗದ ಜನರು ಬರಗಾಲ ಬಂದಾಗ ಮಾತ್ರ ಗುಳೆ ಹೋಗುತ್ತಾರೆ. ನಾನು ಹೇಳುತ್ತಿರುವ ಮೊದಲನೆಯ ವರ್ಗದವರಲ್ಲ, landless people ಅಲ್ಲ. Land holding ಇರುವವರು ಕೂಡ ಈ ತರಹ ಹೋಗುತ್ತಿರುತ್ತಾರೆ. NREGS ನಲ್ಲಿ ನಾವು ಕೆಲಸವನ್ನು ಕೊಟ್ಟಿದ್ದೇವೆಂದು ಸರ್ಕಾರದವರು ಹೇಳುತ್ತಾರೆ. ಆದರೆ ಇವತ್ತಿನವರೆಗೂ ಕೂಡ ಯಾರಿಗೂ ಕೂಡ ಕೆಲಸ ಸಿಕ್ಕಿರುವುದಿಲ್ಲ. ಬರಗಾಲ ಬಂದಾಗ ಗುಳೆ ಹೋಗುತ್ತಾರಲ್ಲಾ, ಇವರಿಗೆ ಕೆಲಸ ಸಿಕ್ಕಿರುವುದಿಲ್ಲ. ಏಕೆಂದರೆ ಇವರು action plan ಅನ್ನು ಮುಂಚಿತವಾಗಿ ಮಾಡಿರುತ್ತಾರೆ. ಇವರು ಬರಗಾಲ ಬರುತ್ತದೆ ಎಂದು ಊಹಿಸಿಕೊಂಡು action plan ಮಾಡಿದ್ದಾರಾ? ಇವರು job card ಅನ್ನು issue ಮಾಡಿರುತ್ತಾರೆ. ಆ ಊರಿನಲ್ಲಿ action planನಲ್ಲಿ ಆ ಕಾರ್ಯಕ್ರಮ ಇದ್ದರೆ Job card ಇರದೇ ಇರುವವರು ಏನು ಮಾಡಬೇಕು? Totally

Government is depending on the NREGS amount. This is not the way of tackling the drought. ಸರ್ಕಾರದವರು ಇದರಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಅದನ್ನು ಹೇಳಬೇಕು. ಜನರಿಗೆ ನಾವು NREGS ನಲ್ಲಿ ಕೆಲಸವನ್ನು ಕೊಟ್ಟಿದ್ದೇವೆ. ಅಲ್ಲಿ ಕೆಲಸವು ನಡೆಯುತ್ತಿದೆ. ಅದರಿಂದ ಉದ್ಯೋಗ ಸಿಗುತ್ತದೆ ಎಂದು ಹೇಳುವುದು ಇದೆಯಲ್ಲಾ, ಇದರಿಂದ ಜನರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಇವರು ಎಲ್ಲರಿಗೂ ಉದ್ಯೋಗವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಆಮೇಲೆ ಪ್ರತಿಯೊಬ್ಬರಿಗೆ ಎಷ್ಟು ದಿನ ಅಂತ ಉದ್ಯೋಗವನ್ನು ಕೊಡುತ್ತೀರಿ? 100 ದಿನಕ್ಕಿಂತ ಕಡಿಮೆ ಇಲ್ಲದಂತೆ ಉದ್ಯೋಗವನ್ನು ಕೊಡಬೇಕೆಂದು ಹೇಳಿದ್ದಾರೆ. ಜಾಸ್ತಿ ದಿನ ಉದ್ಯೋಗ ಬೇಕೆಂದವರಿಗೆ ತಾವು ಏನು ಮಾಡಿದ್ದೀರಿ? ಇದಕ್ಕಾಗಿ ತಾವು ಯಾವ action plan ಮಾಡಿಕೊಂಡಿದ್ದೀರಿ? ಮಾನ್ಯ ಅಧ್ಯಕ್ಷರೆ, ನಾನು ಹೇಳಿರುವಂತಹ ಮಾತು ತಮ್ಮ ಮನಸ್ಸಿಗೆ ಬಂದಿದೆ ಎಂದು ಕಾಣುತ್ತದೆ. ಈ ವರ್ಷ action plan ಮಾಡಿಕೊಂಡಿರುತ್ತಾರೆ. ಮಳೆ ಇಲ್ಲದೆ ಬರಗಾಲವು ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಆಗಿದೆ. ಇವರು ಏಪ್ರಿಲ್ ಮತ್ತು ಮೇ ತಿಂಗಳಲ್ಲಿ action plan ಅನ್ನು ಮಾಡಿಕೊಂಡು approve ಮಾಡಿಕೊಂಡಿರುತ್ತಾರೆ. ಇವರಿಗೆ ಉದ್ಯೋಗ ಬೇಕಾದರೆ, ಉದ್ಯೋಗ ಕೊಡುವುದಕ್ಕೆ ಎಲ್ಲಿಂದ ಸೇರಿಸಿಕೊಳ್ಳುತ್ತಾರೆ? NREGS ಹಣವನ್ನು ಬಿಟ್ಟು ಉದ್ಯೋಗವನ್ನು ಕೊಡುವುದಕ್ಕಾಗಿ ಯಾವ ಜಿಲ್ಲೆಗೂ ಕೂಡ ಒಂದು ರೂಪಾಯಿಯನ್ನೂ ಕೊಟ್ಟಿರುವುದಿಲ್ಲ. ಉದ್ಯೋಗ ಖಾತ್ರಿ ಯೋಜನೆಯೂ ಕೂಡ ನಿಂತು ಹೋಗಿದೆ. 2009–10ನೇ ಸಾಲಿನಲ್ಲಿ ಖರ್ಚಾಗಿರುವಂತಹ ಹಣ 2010–11 ರಲ್ಲಿ ಖರ್ಚಾಗಿರುವುದಿಲ್ಲ. 2010–11ರಲ್ಲಿ ಖರ್ಚಾಗದೇ ಇರುವಂತಹ ಹಣ 2011–12ರಲ್ಲಿ ಖರ್ಚಾಗಿರುವುದಿಲ್ಲ. ಏಕೆಂದರೆ ಇವರು ಸರಿಯಾಗಿ ಹಣವನ್ನು ಖರ್ಚು ಮಾಡಿರುವುದಿಲ್ಲ. ಇವರು utilization certificate ಅನ್ನು ಕೊಟ್ಟಿರುವುದಿಲ್ಲ. ಇವರು 2009–10ನೇ ಸಾಲಿನಲ್ಲಿ NREGS ನಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದರೆಂದು ಹೇಳಬೇಕು. 2010–11ನೇ ಸಾಲಿನಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ? 2011–12ರಲ್ಲಿ ಏಕೆ decline ಆಯಿತು? ಒಂದು ಭಷ್ಟಾಚಾರ, ಇವರು ದುಡ್ಡನ್ನು ಖರ್ಚು ಮಾಡುವುದಕ್ಕೆ ಹೋಗಲಿಲ್ಲ ಮತ್ತು ಅಲ್ಲಿ ಕೆಲಸವೂ ನಡೆಯಲಿಲ್ಲ. ಅಲ್ಲಿರುವಂತಹ ಪಿಡಿಓಗಳು ಯಾರೂ ಕೂಡ ಕೆಲಸ ಮಾಡುವುದಕ್ಕೆ ತಯಾರಿಲ್ಲ. NREGS

ನಲ್ಲಿ ಅವರು ಹೇಳಿದ ಹಾಗೆ ಯಾವ ಕೆಲಸಗಳೂ ಪ್ರಗತಿಯಾಗಲಿಲ್ಲ. ಈ ವರ್ಷ ಅದಕ್ಕಾಗಿ 1100 ಕೋಟಿ ರೂಪಾಯಿಗಳು ಇದೆ.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) : ಇಡೀ ರಾಷ್ಟ್ರಕ್ಕೆ 48,000 ಕೋಟಿಯಲ್ಲಿ ಅರ್ಧ ಹಣವನ್ನು ಕೊಟ್ಟಿರುವುದಿಲ್ಲ. ಕೇಂದ್ರ ಸರ್ಕಾರವೇ ಇಳಿಸಿಕೊಂಡು ಬರುತ್ತಿದೆ. ಆ ಮಾತನ್ನು ತಾವೇ ಹೇಳುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಬಚ್ಚೇಗೌಡರೆ, ತಾವು ಹೇಳುತ್ತಿರುವುದು correct ಆಗಿ ಇದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಈ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್ ರವರು ಹೇಳುತ್ತಾರೆ ಬಿಡಿ. We are number one in the country in utilizing the NREGS money.

ಶ್ರೀ ಸಿದ್ದರಾಮಯ್ಯ : ಹೌದಾ? ಹಾಗಾದರೆ ಹಾಳೂರಿಗೆ ಉಳಿದವನೇ ಗೌಡ. I am not disputing your statement. ಮಾನ್ಯ ಬಚ್ಚೇಗೌಡರೆ, ಬಜೆಟ್‌ನಲ್ಲಿ NREGS ನಲ್ಲಿ 40,000 ಕೋಟಿ ರೂಪಾಯಿಯನ್ನು ಕೇಂದ್ರ ಸರ್ಕಾರ ಇಟ್ಟಿದೆ. 26,000 ಕೋಟಿ ರೂಪಾಯಿಗಳು ಏತಕ್ಕಾಗಿ ಬಿಡುಗಡೆಯಾಯಿತೆಂದರೆ, ಹಣವನ್ನು ಖರ್ಚು ಮಾಡಲಿಲ್ಲ utilization certificate ಅನ್ನು ಕೊಡಲಿಲ್ಲ. ಇಡೀ ದೇಶದ ಬಗ್ಗೆ ನಾನು ಹೇಳುತ್ತಿದ್ದೇನೆ. 2009–10ನೇ ಸಾಲಿನಲ್ಲಿ ನಿಮಗೆ 4000 ಕೋಟಿ ರೂಪಾಯಿಯನ್ನು earmark ಮಾಡಿರುವುದರಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? 2010–11ರಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? 2011–12ನೇ ಸಾಲಿಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಈ ವರ್ಷ ಏತಕ್ಕಾಗಿ 1000 ಕೋಟಿ ಚಿಲ್ಲರೆ ಹಣ ಬಂದಿದೆ? That means to say ಕರ್ನಾಟಕ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿರುವುದಿಲ್ಲ ಹಾಗೂ implementation ಕೂಡ ಸರಿಯಾಗಿ ಮಾಡಿರುವುದಿಲ್ಲ. Implementation ಮಾಡಿರುವುದರಲ್ಲಿ ಮೋಸ ಆಗಿರುವುದರಿಂದ ಇವರು implementation ಮಾಡುವುದಕ್ಕೆ ಆಗದೆ ಇರುವುದರಿಂದ ಇದಕ್ಕಾಗಿ ಕೇಂದ್ರ ಸರ್ಕಾರವು ಹಣವನ್ನು ಬಿಡುಗಡೆ ಮಾಡುವುದರಲ್ಲಿ ಕಡಿಮೆ ಮಾಡಿಕೊಂಡು ಬಂದಿದೆ. Not only to Karnataka, but to the entire country.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಎಲ್ಲಾ ರಾಜ್ಯಗಳಲ್ಲಿ ಈ ಪರಿಸ್ಥಿತಿ ಇದೆ. ನೀವು ಗೈಡ್‌ಲೈನ್ಸ್ ಪ್ರಕಾರ ಹೋಗಬೇಕು. ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಸ್ವಲ್ಪ ಚರ್ಚೆ ಮಾಡೋಣವೆಂದರೆ ಮಾಡೋಣ.

ಶ್ರೀ ಸಿದ್ದರಾಮಯ್ಯ : ಬೇಕಾದರೆ ಚರ್ಚೆ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಕೆಲವು project ಇರುತ್ತವೆ. ಕೆಲವು ರೋಡ್ ವರ್ಕ್ ಇರುತ್ತವೆ. ಬ್ರಿಡ್ಜ್ ಕಟ್ಟುವುದು ಇರುತ್ತವೆ, ಒಂದು ವರ್ಷದಲ್ಲಿ ಆ ಹಣ ಖರ್ಚು ಮಾಡಬೇಕು. ಉದ್ಯೋಗ ಖಾತ್ರಿ ಯೋಜನೆ ಇದೊಂದು ಪ್ರಾಜೆಕ್ಟ್ ಅಲ್ಲ. ಒಂದು ಅಲೋಕೇಶನ್ ಮಾಡಿರುತ್ತಾರೆ. ನಿಮಗೆ ಅವಕಾಶ ಇರುತ್ತದೆ. ಯಾರು ಉದ್ಯೋಗ ಕೇಳಿ ಬರುತ್ತಾರೆ ನಾವು ಅವರಿಗೆ ಉದ್ಯೋಗವನ್ನು ಕೊಡಬೇಕಾಗುತ್ತದೆ. ಇರುವ ಗೈಡ್‌ಲೈನ್ಸ್ ಪ್ರಕಾರ ಖರ್ಚು ಮಾಡಬೇಕಾಗುತ್ತದೆ. ನಾವು implementation proper ಆಗಿಯೇ ಮಾಡಿರುತ್ತೇವೆ.

ಡಾ: ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಉದ್ಯೋಗ ಭರವಸೆ ಯೋಜನೆಯನ್ನು ಉದ್ಯೋಗ ಕೇಳಿ ಬಂದವರಿಗೆ ಕೊಡಬೇಕೆನ್ನುವ ಒಂದು ಉದ್ದೇಶಕ್ಕೆ ಇಟ್ಟಿರುತ್ತಾರೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಹೇಳಿದರು. NREGS ನಲ್ಲಿ assets ಕೂಡ create ಮಾಡುವುದಕ್ಕೆ ಅವಕಾಶ ಇದೆ, irrigational potential create ಮಾಡಬಹುದು, ಶಾಲಾ ಕಟ್ಟಡಗಳು ಇರಬಹುದು, ಆಸ್ಪತ್ರೆ, ಕೆರೆ ಇರಬಹುದು. ನೀವು ಯೋಜನೆಯನ್ನು good will ನಲ್ಲಿ, good intention ಇಟ್ಟುಕೊಂಡು You shroud make use of the project to build the assets also. Asset create ಮಾಡಿ. ಅದರಲ್ಲಿ ಬರಿ ಕೆಲಸವನ್ನೇ ಕೊಡಿ ಎಂದು ಹೇಳಿಲ್ಲ. ನೀವು ನೀರಾವರಿ ಯೋಜನೆಗೆ ಬಳಸಿಕೊಳ್ಳಬಹುದಲ್ಲಾ? ಅಲ್ಲಿ ನಿಮಗೆ ಉದ್ಯೋಗ ಸೃಷ್ಟಿಯಾಗುತ್ತದೆ, ಉತ್ಪಾದನೆ ಆಗುತ್ತದೆ. Irrigation potential create ಆಗುತ್ತದೆ. ಅದಕ್ಕೆಲ್ಲಾ ಬಳಸಿಕೊಳ್ಳುವುದಕ್ಕೆ ನೀವು provision ಮಾಡಿಕೊಳ್ಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಉದ್ಯೋಗ ಮಾಡುವುದಕ್ಕೆ ಜನರು ಬರಬೇಕಲ್ಲವೆ? Machine use ಮಾಡುವುದಕ್ಕೆ ಎಷ್ಟು percentage ಇದೆ? ನೀವು ಅದನ್ನು ಅರ್ಥ ಮಾಡಿಕೊಳ್ಳಿ. ಎಲ್ಲರೂ machine use

ಮಾಡಬೇಕೆಂದು ಹೇಳುತ್ತಾರೆ. ಯಂತ್ರವನ್ನು ಉಪಯೋಗ ಮಾಡಿಕೊಂಡು ಕೆಲಸ ಮಾಡಬೇಕೆಂದು ಹೇಳುತ್ತಾರೆ. ಕೆರೆ ಹೂಳು ತೆಗೆಯಬೇಕು. ಅದಕ್ಕೆ ಜೆ.ಸಿ.ಬಿ. ಯಂತ್ರ ಉಪಯೋಗಿಸಬೇಕೆಂದು ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ : I don't agree with you. ಅಧಿಕಾರಿಗಳು ನಿಮಗೆ ಕೊಟ್ಟಿರುವಂಥ ಮಾಹಿತಿ ಸರಿ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ ಬಂದು desilting ಮಾಡುವುದಕ್ಕೆ ಯಾರೂ ತಯಾರು ಇಲ್ಲ.

ಶ್ರೀ ಸಿದ್ದರಾಮಯ್ಯ : ಅದು ground reality ಅಲ್ಲವೇ ಅಲ್ಲ. ನಾವೆಲ್ಲಾ ಹಳ್ಳಿಯಿಂದ ಬಂದಿರುವವರು. ಏನು ಆಗುತ್ತದೆಂದು ಹಳ್ಳಿಯ ಜನರ ಜೊತೆಯಲ್ಲಿ ಕುಳಿತುಕೊಂಡು ಮಾತನಾಡಿ. ನೀರಾವರಿಗೆ ಮೊದಲನೇ ವರ್ಷ ಸಿಲ್ಟ್ ತೆಗೆಯುವುದಕ್ಕೆಲ್ಲಾ ಮಾಡಿದರು. ಅಲ್ಲಿ ದುಡ್ಡು ತಿಂದಿದ್ದಾರೆಂದು ಆ ನೀರಾವರಿ ಇಲಾಖೆಗೆ ದುಡ್ಡೆ ಕೊಟ್ಟಿಲ್ಲ, ಕೊಟ್ಟಿದ್ದಾರೆನ್ನುವುದರ ಬಗ್ಗೆ ಕೇಳಿ.

ಡಾ: ಹೆಚ್.ಸಿ. ಮಹಾದೇವಪ್ಪ : ಇದುವರೆಗೆ ಹಣ ಕೊಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ : ಹಾಗಾದರೆ ಕೆಲಸಕ್ಕೆ ಎಲ್ಲಿಂದ ಜನ ಬರುತ್ತಾರೆ? ಎಲ್ಲಿ employment generation ಆಗುತ್ತದೊ ಅಲ್ಲಿ ಅದನ್ನು ಬಂದ್ ಮಾಡಿಬಿಟ್ಟಿದ್ದೀರಿ.

ಡಾ: ಹೆಚ್.ಸಿ. ಮಹದೇವಪ್ಪ : ನಮ್ಮ ಟಿ.ನರಸೀಪುರ ತಾಲ್ಲೂಕಿನಲ್ಲಿ ಒಕ್ಕಲಗೆರೆ ಎನ್ನುವ ಒಂದು ಗ್ರಾಮ ಇದೆ. 20 ವರ್ಷದಿಂದ 1000 ಎಕರೆಗೆ ನೀರಾವರಿ ಕೊಡುವುದಕ್ಕಾಗಿಲ್ಲ. ಇದುವರೆಗೆ ಅಲ್ಲಿ ಕೆಲಸ ಮಾಡಿದವರಿಗೆ ದುಡ್ಡನ್ನು ಕೊಟ್ಟಿರುವುದಿಲ್ಲ. ನಾನು ಮಾನ್ಯ ನೀರಾವರಿ ಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರಿಗೆ ಹೇಳಿದ್ದೇನೆ.

ಅಧ್ಯಕ್ಷರು : ಸದನವನ್ನು ಮಧ್ಯಾಹ್ನ 2.30ಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನದ ವಿರಾಮಕ್ಕೆ 1 ಗಂಟೆ 38 ನಿಮಿಷಕ್ಕೆ ಮುಕ್ತಾಯಗೊಳಿಸಿ ಪುನಃ 2 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳುವಂತೆ ನಿಃಶ್ಚಯಿಸಿತು)

(ಸದನವು ಮಧ್ಯಾಹ್ನ 3 ಗಂಟೆ 10 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು. ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯರವರು ಪೀಠವನ್ನು ಅಲಂಕರಿಸಿದರು)